ನದೀ ಪಾತ್ರದಲ್ಲಿ ಬರುವ ಗ್ರಾಮಗಳನ್ನು ರೆವಿನ್ಯೂ ಸರ್ವೆ ಮ್ಯಾಪ್ ಮೇಲೆ ಹೊಂದಾಣಿಕೆ ಮಾಡಲಾಗಿದೆ. ಹೆಸರುಘಟ್ಟ, ಕುಮುದ್ವತಿ ಮತ್ತು ಅರ್ಕಾವತಿ ಜಲಾನಯನ ಪ್ರದೇಶವನ್ನು ನಾಲ್ಕು ವಿಭಾಗಗಳನ್ನಾಗಿ ಮಾಡಿ ತಾಂತ್ರಿಕ ವರದಿಯನ್ನು ತಯಾರಿಸಲಾಗುತ್ತಿದೆ. ಇದರಂತೆ ಮೊದಲನೆ ಹಂತವಾಗಿ ಹೆಸರುಘಟ್ಟ ಜಲಾನಯನ ಪ್ರದೇಶದಲ್ಲಿ ನಂದಿ ಬೆಟ್ಟದಿಂದ ಹೆಸರುಘಟ್ಟದವರಿಗೂ ಕಾಮಗಾರಿಯನ್ನು ಕೈಗೊಳ್ಳಲು ವಿವರವಾದ ಯೋಜನಾ ವರದಿಯನ್ನು ಕಾವೇರಿ ನೀರಾವರಿ ನಿಗಮವು ತಯಾರಿಸಿದೆ. ಅರ್ಕಾವತಿ ನದಿಯು ಕಲುಷಿತವಾಗುವುದನ್ನು ತಡೆಯಲು ಮಾಲಿನ್ಯ ನಿಯಂತ್ರಣ ಮಂಡಳಿ ಕ್ರಮ ತೆಗೆದುಕೊಳ್ಳುತ್ತಿದೆ.

ಬೆಂಗಳೂರು ಜಲಮಂಡಲಿಯು ತಿಪ್ಪಗೊಂಡನಹಳ್ಳಿ ಜಲಾಶಯದ ಬಳಿ ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರದ ಸಹಯೋಗದೊಂದಿಗೆ ಸಿಸ್ಮೋಮೀಟರ್‌ನ್ನು ಅಳವಡಿಸಲಾಗಿದೆ. ಇದರಿಂದ ಜಲಾಶಯದ ಸುತ್ತಮುತ್ತಲ ಪ್ರದೇಶದಲ್ಲಿ ನಡೆಯುವ ಗಣಿಗಾರಿಕೆಯನ್ನು ಪರಿಶೀಲಿಸಲು ಹಾಗೂ ಇದನ್ನು ನಿಯಂತ್ರಿಸಲು ಸಹಾಯಕವಾಗಿದ್ದು, ಕಾಲಕಾಲಕ್ಕೆ ಇದರ ವರದಿಯನ್ನು ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಗಮನಕ್ಕೆ ತರಲಾಗುತ್ತಿದೆ ಹಾಗೂ ಜಲಮಂಡಳಿಯು ನೀರಿನ ಗುಣಮಟ್ಟವನ್ನು ಪರಿಶೀಲಿಸಲು ಜಲಮಾದರಿಗಳನ್ನು ಆಗಾಗ್ಗೆ ಪರೀಕ್ಷಿಸುತ್ತಿದೆ.

ಆ) ಹೌದು.

ಇ) ಈ ಪ್ರಶ್ನೆಗೆ 'ಆ'ದಲ್ಲಿ ತಿಳಿಸಿದಂತೆ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಈ) ಇಲ್ಲ.

ವಾಜಪೇಯಿ ಆಶ್ರಯ ಯೋಜನೆ ಕುರಿತು

142 (394) ಶ್ರೀ ಸಿದ್ದು ಸವದಿ (ತೇರದಾಳ): ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಾಜಪೇಯಿ ಆಶ್ರಯ ಯೋಜನೆ ಅಡಿಯಲ್ಲಿ ರಾಜ್ಯದಲ್ಲಿ ಯಾವ ಯಾವ ನಗರಗಳಲ್ಲಿ ಮನೆ ಕಟ್ಟಡಗಳ ಕೆಲಸವನ್ನು ಪ್ರಾರಂಭಿಸಲಾಗಿದೆ;

ಆ) ತೇರದಾಳ ಮತಕ್ಷೇತ್ರದ ತೇರದಾಳ, ರಬಕವಿ ಬನಹಟ್ಟಿ ಮತ್ತು ಮಹಾಲಿಂಗಪುರ ನಗರಗಳ ಫಲಾನುಭವಿಗಳ ಪಟ್ಟಿ ಮಾಡಿ ಸರ್ಕಾರಕ್ಕೆ ಕಳುಹಿಸಿದ್ದರೂ ಸಹ ಮನೆ ಕಟ್ಟಡಗಳನ್ನು ಪ್ರಾರಂಭಿಸದಿಲ್ಲದಿರುವುದಕ್ಕೆ ಕಾರಣವೇನು; ಯಾವಾಗ ಪ್ರಾರಂಭಿಸಲಾಗುವುದು;

ಇ) ಇನ್ನುಳಿದ ಆಶ್ರಯ ರಹಿತರಿಗೆ ಮತ್ತು ನಿವೇಶನ ರಹಿತರಿಗೆ ಮನೆ ಮತ್ತು ನಿವೇಶನಗಳನ್ನು ಕೊಡುವ ಯೋಜನೆ ಸರ್ಕಾರಕ್ಕೆ ಇದೆಯೇ;

ಈ) ಹಾಗಿದ್ದಲ್ಲಿ, ಎಂದಿನಿಂದ ಹಂಚಿಕೆ ಮಾಡಲಾಗುವುದು?

ಶ್ರೀ ವಿ. ಸೋಮಣ್ಣ (ವಸತಿ ಸಚಿವರು):

ಅ) ನಗರ ಪ್ರದೇಶದ ವಸತಿರಹಿತರಿಗೆ 2010–2011ನೇ ಸಾಲಿನಿಂದ ವಾಜಪೇಯಿ ನಗರ ವಸತಿ ಯೋಜನೆಯನ್ನು ಜಾರಿಗೆ ತರಲಾಗಿದ್ದು, ರಾಜ್ಯದಾದ್ಯಂತ ಒಟ್ಟು 49500 ಮನೆಗಳ ಗುರಿಯನ್ನು ನಿಗದಿಪಡಿಸಲಾಗಿರುತ್ತದೆ.

ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮದಿಂದ 5614 ಫಲಾನುಭವಿಗಳ ಪಟ್ಟಿಗೆ ಅನುಮೋದನೆಯನ್ನು ನೀಡಿ, ಸದರಿ ಯೋಜನೆಯಡಿಯಲ್ಲಿ ನಮ್ಮ ಮನೆ (ಐಹೆಚ್‌ಎಸ್‌ಯುಪಿ) ಯೋಜನೆಯಡಿಯಲ್ಲಿ ರೂ. 50,000/–ಗಳ ಸಾಲ ಒಳಗೊಂಡಿರುವುದರಿಂದ ಸಾಲ ಮಂಜೂರಾತಿಗೆ ಬ್ಯಾಂಕುಗಳಿಗೆ ಕಳುಹಿಸಲಾಗಿದೆ.

ಬೆಂಗಳೂರು ನಗರ ಜಿಲ್ಲೆ, ಉತ್ತರ ತಾಲ್ಲೂಕು, ಸಿಂಗನಾಯಕನಹಳ್ಳಿ ಗ್ರಾಮದಲ್ಲಿ 200 ಮನೆಗಳನ್ನು ಪೂರ್ಣಗೊಳಿಸಲಾಗಿದೆ. ಚಿಕ್ಕಮಗಳೂರು ನಗರದಲ್ಲಿ 747 ಮನೆಗಳ ನಿರ್ಮಾಣ ಕಾರ್ಯಕ್ಕೆ ಶಂಕುಸ್ಥಾಪನೆಯನ್ನು ದಿನಾಂಕ: 14.02.2011ರಂದು ನೆರವೇರಿಸಲಾಗಿರುತ್ತದೆ.

ಆ) ತೇರದಾಳ ಮತಕ್ಷೇತ್ರದಲ್ಲಿ ಬರುವ ಈ ಕೆಳಕಂಡ ಪಟ್ಟಣಗಳಿಗೆ ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮದಿಂದ ಫಲಾನುಭವಿಗಳ ಪಟ್ಟಿಗೆ ಅನುಮೋದನೆ ನೀಡಲಾಗಿದೆ.

ಕ್ರ.ಸಂ.	ಪಟ್ಟಣ /ನಗರ	ಗುರಿ	ನಿಗಮದಿಂದ ಅನುಮೋದನೆ ಪಡೆದ ಫಲಾನುಭವಿಗಳ ಸಂಖ್ಯೆ
1.	ತೇರದಾಳ ಪುರಸಭೆ	125	152*
2.	ಮಹಾಲಿಂಗಪುರ ಪುರಸಭೆ	125	125
3.	ರಬಕವಿ–ಬನಹಟ್ಟಿ ನಗರಸಭೆ	300	300

*ತೇರದಾಳ ಪುರಸಭೆಯಲ್ಲಿ ಗುರಿಗಿಂತ 27 ಹೆಚ್ಚು ಫಲಾನುಭವಿಗಳನ್ನು ಆಯ್ಕೆ ಮಾಡಿದ್ದು, ಅದರಂತೆ ಹೆಚ್ಚುವರಿ ಗುರಿಯನ್ನು ಪರಿಗಣಿಸಲಾಗಿದೆ.

ಸದರಿ ಫಲಾನುಭವಿಗಳ ಪಟ್ಟಿಯನ್ನು ಸಂಬಂಧಪಟ್ಟ ಬ್ಯಾಂಕುಗಳಿಗೆ ಸಾಲ ಮಂಜೂರಾತಿಗಾಗಿ ಕಳುಹಿಸಲು ನಗರಸಭೆ ಮತ್ತು ಪುರಸಭೆಯವರಿಗೆ ತಿಳಿಸಲಾಗಿದ್ದು, ಸಾಲ ಮಂಜೂರಾದ ಕೂಡಲೇ ಮನೆಗಳ ಕಾಮಗಾರಿ ಪ್ರಾರಂಭಿಸಲಾಗುವುದು.

ಇ) ನಗರ ಪ್ರದೇಶದ ವಸತಿ/ನಿವೇಶನ ರಹಿತರಿಗೆ ವಸತಿ ಹಾಗೂ ನಿವೇಶನಗಳನ್ನು ಹಂಚಿಕೆ ಮಾಡಲು 2010–11ನೇ ಸಾಲಿನಿಂದ ವಾಜಪೇಯಿ ನಗರ ವಸತಿ ಯೋಜನೆ ಹಾಗೂ ವಾಜಪೇಯಿ ನಗರ ನಿವೇಶನ ಯೋಜನೆಯನ್ನು ಜಾರಿಗೆ ತರಲಾಗಿದ್ದು, ತೇರದಾಳ್ ಮತಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ನಗರ/ಪಟ್ಟಣಗಳಿಗೆ ಈ ಕೆಳಗಿನಂತೆ ಗುರಿಯನ್ನು ನೀಡಲಾಗಿರುತ್ತದೆ.

		ವಾಜಪೇಯಿ ನಗರ ನಿವೇಶನ ಯೋಜನೆ		ವಾಜಪೇಯಿ ನಗರ ವಸತಿ ಯೋಜನೆ	
ಕ್ರ. ಸಂ.	ನಗರ /ಪಟ್ಟಣ	ಗುರಿ	ಹಂಚಿಕೆ ಮಾಡಲಾದ ನಿವೇಶನಗಳ ಸಂಖ್ಯೆ	ಗುರಿ	ಮಂಜೂರು ಮಾಡಲಾದ ಮನೆಗಳ ಸಂಖ್ಯೆ
1.	ತೇರದಾಳ್ ಪುರಸಭೆ	250	0	125	152
2.	ರಬಕವಿ–ಬನಹಟ್ಟಿ ನಗರಸಭೆ	600	0	300	300
3	ಮಹಾಲಿಂಗಪುರ ಪುರಸಭೆ	250	0	125	125
	ಒಟ್ಟು	1100	0	550	577

ಈ) ಉಳಿದ ವಸತಿ ರಹಿತರಿಗೆ ವಸತಿ ಸೌಕರ್ಯ ಕಲ್ಪಿಸಲು ಈಗಾಗಲೇ ವಾಜಪೇಯಿ ನಗರ ವಸತಿ ಯೋಜನೆ ಜಾರಿಯಲ್ಲಿದ್ದು, ಈ ಯೋಜನೆಯಡಿ ಸ್ಥಳೀಯ ಸಂಸ್ಥೆಗಳಿಂದ ಹೆಚ್ಚಿನ ಮನೆ ನೀಡಲು ಬೇಡಿಕೆ ಬಂದಲ್ಲಿ ಅವುಗಳನ್ನು ಪರಿಗಣಿಸಲಾಗುತ್ತದೆ.

ಈಗಾಗಲೇ ತೇರದಾಳ್ ಪುರಸಭೆಯಲ್ಲಿ ಹೆಚ್ಚುವರಿ ಆಯ್ಕೆ ಮಾಡಲಾದ 27 ಮನೆಗಳ ಗುರಿಯನ್ನು ಪರಿಗಣಿಸಲಾಗಿರುತ್ತದೆ.